# ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ತರೀಕೆರೆ
## ವೃತ್ತ ಮಾರಾಟಾಧಿಕಾರಿಗಳಿಂದ ಸ್ಥಿರ ಸ್ವತ್ತುಗಳ ಬಹಿರಂಗ ಹರಾಜು ಇಸ್ತಿಹಾರ್

ಈ ಮೂಲಕ ಸಮಸ್ತ ಜನರಿಗೆ ತಿಳಿಯಪಡಿಸುವುದೇನೆಂದರೆ,

ವಸೂಲಾಧಿಕಾರಿ ಹಾಗೂ ಸಹಕಾರ ಸಂಘಗಳ ಸಹಾಯಕ ನಿಬಂಧಕರು, ಚಿಕ್ಕಮಗಳೂರು ಇವರಿಂದ ಅಧಿಕಾರ ಹೊಂದಿರುವ ಮಾರಾಟಾಧಿಕಾರಿಯಾದ ನಾನು ತಿಳಿಯಪಡಿಸುವುದೇನೆಂದರೆ, ಈ ಕೆಳಕಂಡವರು ತರೀಕೆರೆ ತಾಲ್ಲೂಕು ಚಿಕ್ಕಮಗಳೂರು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ನಿಯಮಿತ., ತರೀಕೆರೆ ಶಾಖೆ ಈ ಬ್ಯಾಂಕಿನಿಂದ ತಮ್ಮ ಸ್ಥಿರಾಸ್ತಿಯ ಮೇಲೆ ಸಾಲ ಪಡೆದು ಇದರ ಸುಸ್ತಿದಾರರಾಗಿ ಸಾಲದ ಬಾಬ್ತು ಡಿಕ್ರಿಯಾಗಿ ಬ್ಯಾಂಕ್ ಗೆ ಆಧಾರ ಮಾಡಿದ ಕೆಳಗೆ ನಮೂದಿಸಿರುವ ಸ್ವತ್ತನ್ನು ಕರ್ನಾಟಕ ಸಹಕಾರ ಸಂಘಗಳ ಕಾನೂನು ಮತ್ತು ಕಾಯಿದೆ 38 ರನ್ವಯ ಬಹಿರಂಗವಾಗಿ ಹರಾಜು ಮಾಡಲಾಗುತ್ತದೆ, ಬಹಿರಂಗ ಹರಾಜಿನಲ್ಲಿ ಭಾಗವಹಿಸಿ ಈ ಸ್ವತ್ತನ್ನು ಹರಾಜಿನಲ್ಲಿ ಇಷ್ಟವುಳ್ಳವರು ಹರಾಜಿನ ಷರತ್ತಿಗೊಳಪಟ್ಟು ಸದರಿ ಆಸ್ತಿಗಳನ್ನು ಕೊಂಡುಕೊಳ್ಳಬಹುದಾಗಿರುತ್ತದೆ. ಹೆಚ್ಚಿನ ವಿವರಗಳನ್ನು ಕೆಳ ಸಹಿ ಮಾಡಿರುವ ಮಾರಾಟಾಧಿಕಾರಿ/ಮೇಲ್ವಿಚಾರಕರು ಇವರಲ್ಲಿ ಪಡೆಯಬಹುದು. ದೂ. ಸಂಖ್ಯೆ: 9449716303.

| ಸುಸ್ತಿದಾರರ ವಿವರ / ಭಾವಚಿತ್ರ | ಸುಸ್ತಿದಾರರ ಹೆಸರು ಮತ್ತು ವಿಳಾಸ | ಡಿಕ್ರಿ ಮತ್ತು ಇ.ಪಿ ನಂ ಮೊಬಲಗು | ಹರಾಜು ಮಾಡುವ ಸ್ಥಳ | ಹರಾಜು ಮಾಡುವ ತಾರೀಖು ಮತ್ತು ವೇಳೆ | ಸ್ಥಿರಾಸ್ತಿಗಳ ವಿವರ ತಾ. ಗ್ರಾ. ಸ.ನಂ | ವಿಸ್ತೀರ್ಣ ಎ. ಗು. ಮತ್ತು ತರಹೆ |
|---|---|---|---|---|---|---|
|   1. ಸುಸ್ತಿದಾರರು 2. ಜಾಮೀನುದಾರರು ಟಿ.ಆರ್.ರಮೇಶ್ ಬಿನ್ ಲೇಟ್ ರಾಮಪ್ಪ ಟಿ.ಎನ್ ದಾಸರ ಬೀದಿ, ತರೀಕೆರೆ. | ಶ್ರೀಮತಿ ಗಾಯತ್ರಮ್ಮ.ಪಿ ಕೋಂ ಲೇಟ್ ಓಂಕಾರಾಚಾರ್ ಮಾರುತಿ ಬೀದಿ, ತರೀಕೆರೆ ತಾಲ್ಲೂಕು | 75/2021–22 ರೂ. 33,97,523 + ಬಡ್ಡಿ + ಇತರೆ | ಸಿ.ಡಿ.ಸಿ.ಸಿ ಬ್ಯಾಂಕ್ ತರೀಕೆರೆ ಶಾಖೆ, ಎಂ.ಜಿ.ಸರ್ಕಲ್, ತರೀಕೆರೆ | ದಿನಾಂಕ: 29/11/2023 ಮಧ್ಯಾಹ್ನ 12.00 ಗಂಟೆಗೆ | ತರೀಕೆರೆ ತಾ, ಮಾರುತಿ ಬೀದಿ 8–105–33 ಅಸೆಸ್‌ಮೆಂಟ್ 84/82 | 76x31 (ಪೈಕಿ 29x31 ಅಡಿ ಆರ್.ಸಿ.ಸಿ ಕಟ್ಟಡ ಹಾಗೂ 47x31 ಅಡಿ ಖಾಲಿ ನಿವೇಶನ |

### ಹರಾಜಿನ ಷರತ್ತುಗಳು:

1. ಹರಾಜಿನಲ್ಲಿ ಭಾಗವಹಿಸುವವರು ಹರಾಜಿಗೆ ಮುಂಚಿತವಾಗಿ ರೂ.25000/– (ಇಪ್ಪತ್ತೈದು ಸಾವಿರ ರೂಪಾಯಿಗಳು) ಪ್ರಾರಂಭಿಕ ಠೇವಣಿಯನ್ನು ಪಾವತಿಸತಕ್ಕದ್ದು, ಈ ಹಣವನ್ನು ಬ್ಯಾಂಕಿಗೆ ನಗದಾಗಿ ಅಥವಾ ಬ್ಯಾಂಕಿನ ಹೆಸರಿಗೆ ಡಿ.ಡಿ. ಸಲ್ಲಿಸುವ ಮೂಲಕ ಪಾವತಿಸುವುದು. ಯಶಸ್ವಿ ಬಿಡ್ಡುದಾರರ ಪ್ರಾರಂಭಿಕ ಠೇವಣಿಯನ್ನು ಹೊರತುಪಡಿಸಿ ಉಳಿದವರ ಮೊಬಲಗನ್ನು ಹಿಂದಿರುಗಿಸಲಾಗುವುದು.
2. ಯಶಸ್ವಿಯಾದ ಬಿಡ್ಡುದಾರರು ಬಿಡ್ಡಿನ ಮೊಬಲಗಿನ ಪೈಕಿ ಶೇ.15% ರಷ್ಟು ಮೊಬಲಗನ್ನು ಹರಾಜಿನ ದಿನವೇ ಬ್ಯಾಂಕಿಗೆ ನಗದಾಗಿ ಅಥವಾ ಬ್ಯಾಂಕಿನ ಹೆಸರಿಗೆ ಡಿ.ಡಿ. ಸಲ್ಲಿಸುವ ಮೂಲಕ ಪಾವತಿಸತಕ್ಕದ್ದು ಮತ್ತು ಬಿಡ್ಡಿನ ಹಣದ ಉಳಿಕೆ ಮೊಬಲಗನ್ನು ಅಂದರೆ ಶೇ. 85 ರನ್ನು ಮಾರಾಟದ ದಿನಾಂಕದಿಂದ 45 ದಿನದ ಒಳಗಾಗಿ ಪಾವತಿಸತಕ್ಕದ್ದು, ತಪ್ಪಿದರೆ ಬಿಡ್ಡುದಾರರು ಪಾವತಿಸುವ ಪ್ರಾರಂಭಿಕ ಠೇವಣಿ ಮೊಬಲಗನ್ನು ಕಳೆದುಕೊಳ್ಳಲು ಬಾಧ್ಯರಾಗಿರತಕ್ಕದ್ದು.
3. ಮೇಲೆ ಹೇಳಿದ ಪ್ರಕಾರ ನಿಗದಿತ ಸಮಯ/ದಿನಾಂಕದೊಳಗೆ ಹಣವನ್ನು ಕಟ್ಟದಿದ್ದರೆ ಅಥವಾ ಬಿಡ್ಡಿನ ಹಣದ ಪೈಕಿ ಉಳಿದ ಮೊಬಲಗನ್ನು ಪಾವತಿಸದಿದ್ದರೆ ಯಶಸ್ವಿ ಬಿಡ್ಡುದಾರರ ಸಂಬಂಧದಲ್ಲಿ ಹರಾಜಿನ ಖರ್ಚು ವೆಚ್ಚ ಮತ್ತು ನಷ್ಟ ಒಳಗೊಂಡಂತೆ ಬಿಡ್ಡುದಾರರ ಪಾವತಿ ಹಣದಲ್ಲಿ ಕಟಾಯಿಸಲಾಗುವುದು ಮತ್ತು ಹರಾಜಿನ ಪ್ರಕ್ರಿಯೆಯ ನಡಾವಳಿಗಳು ಮುಕ್ತಾಯವಾಗಿದೆಯೆಂದು ಬಾವಿಸತಕ್ಕದ್ದು.
4. ಹರಾಜು ಸಮಯದಲ್ಲಿ ಬಿಡ್ಡುದಾರರು ತಾವು ತಮ್ಮ ಸ್ವಂತಕ್ಕಾಗಿ ಬಿಡ್ಡು ಮಾಡುತ್ತಿದ್ದಾರೆಯೋ ಅಥವಾ ಅನ್ಯರ ಪರವಾಗಿ ಮಾಡುತ್ತಾರೊ ಎಂಬ ಬಗ್ಗೆ ಮಾಹಿತಿಯನ್ನು ಮಾರಾಟಾಧಿಕಾರಿಗೆ ಸಲ್ಲಿಸತಕ್ಕದ್ದು, ಅನ್ಯರ ಪರವಾಗಿ ಬಿಡ್ಡು ಮಾಡುವ ಪಕ್ಷದಲ್ಲಿ ಬಿಡ್ಡುದಾರರು ಅನ್ಯರಿಂದ ಈ ಬಗ್ಗೆ ಅವರ ಅನುಮತಿಯನ್ನು ತಾವು ಪಡೆದುಕೊಂಡಿರುವ ಬಗ್ಗೆ ಅಧಿಕಾರ ಪತ್ರವನ್ನು ಮತ್ತು ಬಿಡ್ಡುದಾರರ ಹಾಗೂ ಅನ್ಯರ ಸರ್ಕಾರದ ಯಾವುದಾದರು ಗುರುತಿನ ಚೀಟಿಯನ್ನು ಸಲ್ಲಿಸತಕ್ಕದ್ದು. ಈ ಪ್ರಕಾರ ಹರಾಜು ಮಾಡದೇ ಇದ್ದರೆ ಅವರ ಬಿಡ್ಡಿನಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ.
5. ಬಾಕಿದಾರರು ಅಸಲು, ಬಡ್ಡಿ ಹಾಗೂ ಇತರೆ ಖರ್ಚುಗಳ ಸಮೇತ ಪೂರ್ಣ ಮೊಬಲಗನ್ನು ಹರಾಜು ಮಾಡುವ ಮೊದಲೇ ಪಾವತಿಸಿದರೆ ಈ ಹರಾಜನ್ನು ನಿಲ್ಲಿಸಲಾಗುವುದು.
6. ಈ ಹರಾಜು ನಡಾವಳಿಗಳನ್ನು ಸಹಕಾರ ಸಂಘಗಳ ಸಹಾಯಕ ನಿಬಂಧಕರು/ವಸೂಲಾಧಿಕಾರಿ ಖಾಯಂ ಮಾಡುವವರೆಗೆ ಖಾಯಂ ಆಗತಕ್ಕದಲ್ಲ ಮತ್ತು ಅಂತಹ ಮಾರಾಟಕ್ಕೆ ಸಂಬಂಧಪಟ್ಟ ಯಾವುದೊಂದು ವ್ಯವಹರಣೆಯಿಂದ ಅನ್ಯಾಯವನ್ನು ಹೊಂದಿದವರು ಅಪೀಲುಗಳನ್ನು ಹರಾಜಿನ ತಾರೀಖಿನಿಂದ 30 ದಿವಸಗಳ ಒಳಗಾಗಿ ಸಲ್ಲಿಸಬಹುದಾಗಿದೆ. ಮಾರಾಟವು ಮಂಜೂರು ಮಾಡಿದ ನಂತರ ಅದರ ಮೇಲಣಕಸ್ತೆ ಪಾವತಿ ಮಾಡಿದ್ದಲ್ಲಿ ಹಾಗೂ ಅಪೇಕ್ಷಿಸುವ ಮಾಹಿತಿ, ದಾಖಲಾತಿಗಳನ್ನು ಒದಗಿಸಿದರೆ ಸಹಕಾರ ಸಂಘಗಳ ನಿಬಂಧಕರ ಸಹಿ ಮತ್ತು ಮೊಹರಿನೊಂದಿಗೆ ಮಾರಾಟದ ಪ್ರಮಾಣ ಪತ್ರವನ್ನು ಕೊಡುತ್ತಾರೆ.
7. ಭೂಮಿಗಳ ವಿವರಣೆ ಅಥವಾ ಅವುಗಳ ಅಂದಾಜು ಮಾಡಲಾಗಿರುವ ವಿಸ್ತೀರ್ಣದ ವಿಷಯದಲ್ಲಿ ಹಾಗೂ ಮೌಲ್ಯಮಾಪನದಲ್ಲಿ ಇರುವ ತಪ್ಪುಗಳಿಗೆ ಈ ನ್ಯಾಯಾಲಯ ಮತ್ತು ಸರ್ಕಾರವು ಜವಾಬ್ದಾರಿಯಲ್ಲ. ಸ್ವತ್ತು ಯಾವ ಸ್ಥಿತಿಯಲ್ಲಿ ಇದೆಯೋ ಅದೇ ಸ್ಥಿತಿಯಲ್ಲಿ ಹರಾಜು ಮೂಲಕ ಮಾರಾಟ ಮಾಡಲಾಗುವುದು.
8. ವಸೂಲಾಧಿಕಾರಿ/ಮಾರಾಟಾಧಿಕಾರಿಗಳು ಯಾವುದೇ ಸಂದರ್ಭದಲ್ಲಿ ಹರಾಜು ಪ್ರಕ್ರಿಯೆಯನ್ನು ಯಾವುದೇ ಮುನ್ಸೂಚನೆ ಇದಲ್ಲದೆ ಮುಂದೂಡಬಹುದಾಗಿದೆ ಅಥವಾ ಹರಾಜಿನಲ್ಲಿ ಬಂದ ಬೆಲೆಯು ತೃಪ್ತಿಕರವಾಗಿಲ್ಲವೆಂದು ಮಾರಾಟಾಧಿಕಾರಿಗಳಿಗೆ ಕಂಡುಬಂದಲ್ಲಿ ಹರಾಜನ್ನು ನಿಲ್ಲಿಸಬಹುದಾಗಿದೆ.
9. ಯಾರು ಬಿಡ್ ಮಾಡದಿದ್ದಲ್ಲಿ ಸಹಕಾರ ಸಂಘದ ಹೆಸರಿಗೆ ನಿಲ್ಲಲು ಅವಕಾಶವಿರುತ್ತದೆ.

ಸಹಿ/–
ವೆಂಕಟೇಶ್ ಎಸ್.
(9449716303)
(ಮೇಲ್ವಿಚಾರಕರು ಹಾಗೂ ಮಾರಾಟಾಧಿಕಾರಿ)
ಚಿ.ಜಿ.ಸ.ಕೇ.ಬ್ಯಾಂಕ್ ನಿ., ತರೀಕೆರೆ

ದಿನಾಂಕ: 27/10/2023
ಸ್ಥಳ: ತರೀಕೆರೆ

Ro No 1033